




ನಾವು ಚಿಕ್ಕವರಿದ್ದಾಗ ನೋಡಿದ ಯಾವುದೋ ಮುಖವನ್ನು ನೋಡಿದಂತಾಯಿತು. ಹತ್ತಿರ ಹೋಗಿ ನೋಡಿದಾಗ ಅದು 'ಹ್ಯೂ ಎನ್ ತ್ಸಾಂಗ್'ನ ಮೂರ್ತಿ ಎಂದು ಅರಿವಾಯಿತು. ಕೊನೆಯಲ್ಲಿ ಟಾಂಗ್ ಮನೆತನದ ಕಾಲದ 'ಬಾಯ್ ಜುಯಿ' ಎನ್ನುವ ಕವಿಯ ಸಮಾಧಿಯನ್ನು ನೋಡಿ ಹೋಟೆಲಿಗೆ ಮರಳಿದೆವು.

### ಶ್ಯಾವೊಲಿನ್ ದೇಗುಲದ ಅಂಗಳದಲ್ಲಿ

ಮರುದಿನ ಬೆಳಗಿನ ತಿಂಡಿಯನ್ನು ಮುಗಿಸಿ, ಒಂದೂವರೆ ಗಂಟೆ ಟ್ಯಾಕ್ಸಿಯಲ್ಲಿ ಪ್ರಯಾಣಿಸಿ, ಶ್ಯಾವೊಲಿನ್ ದೇವಸ್ಥಾನ ತಲುಪಿದೆವು. ಕೆಲವು ಇತಿಹಾಸಕಾರರ ಪ್ರಕಾರ ಭಾರತದಿಂದ ಹೋದ ಬೌದ್ಧ ಮುನಿ ಬೋಧಿಧರ್ಮ, ಝೆನ್ ಬೌದ್ಧ ಮಾರ್ಗವನ್ನು ಇಲ್ಲಿ ಕಲಿಸಿದ. ಈತ ಬೌದ್ಧ ಧರ್ಮ ಮತ್ತು ಚೀನಿಯರ ದೈಹಿಕ ಶಿಕ್ಷಣ ಎರಡನ್ನೂ ಸೇರಿಸಿ ಶ್ಯಾವೊಲಿನ್ ಕುಂಗ್ ಫೂ ಹುಟ್ಟುಹಾಕಿದ.

ಬೋಧಿಧರ್ಮ ಈ ದೇವಸ್ಥಾನದ ಬಳಿ ಇರುವ ಗುಹೆಯಲ್ಲಿ ವಾಸಿಸಿದ್ದನಂತೆ. ಗುಹೆಯ ಗೋಡೆಗೆ ಮುಖ ಮಾಡಿ ಅಲ್ಲಿಯೇ ಧ್ಯಾನ ಮಾಡುತ್ತಿದ್ದನಂತೆ. ಹಾಗೆಯೇ ಈತನ ಶಿಷ್ಯತ್ವವನ್ನು ಪಡೆಯಬೇಕೆಂದು ಬಂದ ಚೀನಾದ ವ್ಯಕ್ತಿಯೊಬ್ಬ ಹಿಮದಿಂದ ಸುತ್ತುವರಿದ ಗುಹೆಯ ಹೊರಗೆ ನಿಂತು 'ನನ್ನನ್ನು ಸ್ವೀಕರಿಸು' ಎಂದಾಗ 'ನೀನು ನಿಜವಾಗಿಯೂ ನನ್ನ ಶಿಷ್ಯ ಆಗಬೇಕೆಂದಿದ್ದರೆ ಈ ಹಿಮವನ್ನು ಕೆಂಪು ಮಾಡಿ ತೋರಿಸು' ಎಂದು ಬೋಧಿಧರ್ಮ ಹೇಳಿದನಂತೆ. ಆ ವಿದ್ಯಾಕಾಂಕ್ಷಿ ತನ್ನ ಬಲಗೈಯನ್ನು ಕತ್ತರಿಸಿ ಹಿಮವನ್ನು ರಕ್ತದಲ್ಲಿ ತೋಯಿಸಿದನಂತೆ. ನಂತರ ಆತನನ್ನು ಬೋಧಿಧರ್ಮ ತನ್ನ ಶಿಷ್ಯನನ್ನಾಗಿಸಿಕೊಂಡ ಎನ್ನುವುದು ಇನ್ನೊಂದು ನಂಬಿಕೆ. ಈ ಕಥೆಗಳನ್ನು ಬಿಂಬಿಸುವ ಇತ್ತೀಚಿನ ಪೇಂಟಿಂಗ್‌ಗಳನ್ನೂ ಕುಂಗ್ ಫೂ ಶಾಲೆಯ ಹೊರಭಾಗದಲ್ಲಿ ನೋಡಿದೆವು.

ಆ ದೇವಸ್ಥಾನದ ಆವರಣದಲ್ಲಿ ಈಗ ಸಾವಿರಾರು ವಿದ್ಯಾರ್ಥಿಗಳು ಕುಂಗ್ ಫೂ ಕಲಿಯುತ್ತಾರೆ. ದೇಶ ವಿದೇಶಗಳಿಂದಲೂ ಜನ ಬರುತ್ತಾರೆ. ದೇವಸ್ಥಾನದ ಆವರಣದಲ್ಲೇ ಕುಂಗ್ ಫೂ ಪ್ರದರ್ಶನವೂ ಇರುತ್ತದೆ. ಕುಂಗ್ ಫೂ ಪ್ರದರ್ಶನ ನೋಡಿ, ದೇವಸ್ಥಾನವನ್ನು ನೋಡಿ ನಾವು ಅಲ್ಲೇ ಇರುವ ಸಸ್ಯಾಹಾರಿ ರೆಸ್ಟೋರೆಂಟ್‌ನಲ್ಲಿ ಮಧ್ಯಾಹ್ನ ಊಟ ಮಾಡಿದೆವು. 'ಇಲ್ಲಿನ ವಿದ್ಯಾರ್ಥಿಗಳು, ಬೌದ್ಧ ಗುರುಗಳು ಬೆಳ್ಳುಳ್ಳಿ, ಈರುಳ್ಳಿ ತಿನ್ನುವುದಿಲ್ಲ. ಸಾತ್ವಿಕ ಆಹಾರಿಗಳು' ಎಂದು ನಮ್ಮ ಗೈಡ್ ವಿವರಿಸುತ್ತಿದ್ದ.

### ಶ್ವೇತಾಶ್ವಕ್ಕೊಂದು ಮಂದಿರ

ಇಲ್ಲಿಂದ ನಾವು ವೈಟ್ ಹಾರ್ಸ್ ಮಂದಿರಕ್ಕೆ ಹೊರಟಾಗ ಮಧ್ಯಾಹ್ನ ಮೂರು ಗಂಟೆ. ಈ ದೇವಸ್ಥಾನವು ಚೀನಾದ ಉಳಿದ ದೇವಸ್ಥಾನಗಳಿಗೆ ಹೋಲಿಸಿದರೆ ಅಳತೆಯಲ್ಲಿ ಚಿಕ್ಕದಾದರೂ ಐತಿಹಾಸಿಕವಾಗಿ ಬಹಳ ಮಹತ್ವವುಳ್ಳದ್ದು. ಇದನ್ನು ಚೀನಾದ ಮೊದಲನೇ ಬೌದ್ಧ ಮಂದಿರ ಎನ್ನಲಾಗುತ್ತದೆ. ದೇವಸ್ಥಾನದ ಹೊರ ಆವರಣದಲ್ಲಿರುವ ಎರಡು ಕುದುರೆಗಳು ಭಾರತದಿಂದ ಬೌದ್ಧ ಗುರುಗಳನ್ನು ಮತ್ತು ಬೌದ್ಧ ಗ್ರಂಥಗಳನ್ನು ಹೊತ್ತು ತಂದವು ಎಂದು ನಂಬಲಾಗುತ್ತದೆ. 'ಮಿಂಗ್' ಎನ್ನುವ ರಾಜ ಈ ಮಂದಿರವನ್ನು ಕಟ್ಟಿಸಿದ ಮತ್ತು ಭಾರತದಿಂದ ಬಂದ ಗುರುಗಳು ಈ ದೇವಸ್ಥಾನದಲ್ಲಿ ಉಳಿದು ಬೌದ್ಧ ಗ್ರಂಥಗಳನ್ನು ಚೀನೀ ಭಾಷೆಗೆ ಭಾಷಾಂತರಿಸಿದರು ಎನ್ನಲಾಗುತ್ತದೆ. ದೇವಸ್ಥಾನದ ಒಳಗೆ ಈಗಲೂ ಬೌದ್ಧ ಧರ್ಮದ ಪೂಜೆ ಪುನಸ್ಕಾರಗಳನ್ನು ನೋಡಬಹುದು.

ಇಲ್ಲಿನ ಆವರಣದಲ್ಲೇ ಈ ಇಬ್ಬರು ಬೌದ್ಧ ಗುರುಗಳ ಸಮಾಧಿ ಕೂಡ ಇದೆ. ಈಗ ದೇವಸ್ಥಾನದ ವಿಸ್ತರಿಸಿದ ಭಾಗದಲ್ಲಿ ಭೂತಾನ್, ಥಾಯ್ಲೆಂಡ್ ಮತ್ತು ಭಾರತದ ಮಾದರಿಯ ಬೌದ್ಧ ದೇವಾಲಯಗಳಿವೆ. 2008ರಲ್ಲಿ ಸಂಚಿ ಸ್ತೂಪ ಮತ್ತು ಸಾರಾನಾಥ ಬುದ್ಧ ವಿಗ್ರಹಗಳನ್ನು ಪ್ರತಿಭಾ ಪಾಟೀಲ್ ಅವರು ರಾಷ್ಟ್ರಪತಿಯಾದ ಅವಧಿಯಲ್ಲಿ ಸಮರ್ಪಿಸಿದರು ಎಂದು ಓದಿ ತಿಳಿದೆ.

ನಮ್ಮ ಎರಡು ದಿನಗಳ ಲೊಂಗ್‌ಮನ್ ಗುಹೆಗಳ ಒಂದು ಅಪೂರ್ವ ಅನುಭವ. ಈ ಸ್ಥಳಗಳನ್ನು ನೋಡಿ ಆದ ಖುಷಿಯ ಅನುಭವ ಚಳಿಯನ್ನು ಮರೆಸಿ ಒಂದು ಬೆಚ್ಚಗಿನ ಭಾವವನ್ನು ತಂದುಕೊಟ್ಟಿತ್ತು.

## ಪಗೋಡ ಕಾಡು

ಊಟ ಮುಗಿಸಿ 'ಪಗೋಡ ಫಾರೆಸ್ಟ್' ಕಡೆಗೆ ಹೊರಟೆವು. ಪಗೋಡಗಳು ಕಲ್ಲು ಅಥವಾ ಇಟ್ಟಿಗೆಗಳಿಂದ ಮಾಡಿದ ಗೋಪುರದ ಮಾದರಿಯ ಸಮಾಧಿಗಳು. ದೇವಸ್ಥಾನದ ಬುದ್ಧ ಮುನಿಗಳ ಜೀವಿತಾವಧಿಯ ಸಾಧನೆಗಳು ಮತ್ತು ಕೊಡುಗೆಗಳ ಮೇಲೆ ಪಗೋಡಾದ ಎತ್ತರ, ಅದರ ಮೇಲಿರುವ ಚಕ್ರಗಳು ಎಲ್ಲ ಅವಲಂಬಿತವಾಗಿರುತ್ತವೆಯಂತೆ. ಇಲ್ಲಿ ವಿವಿಧ ಆಕಾರದ, ಎತ್ತರದ 243 ಪಗೋಡಾಗಳು ಇವೆ. ದೇವಸ್ಥಾನ ಹಳೆಯದಾದಷ್ಟು, ಐತಿಹಾಸಿಕ ಮಹತ್ವ ಹೆಚ್ಚಿದ್ದಷ್ಟು ಪಗೋಡಾಗಳ ಸಂಖ್ಯೆಯೂ ಜಾಸ್ತಿ ಆಗುತ್ತದಂತೆ.

ಶ್ಯಾವೊಲಿನ್ ದೇವಸ್ಥಾನ ಮತ್ತು ಪಗೋಡಾ ಫಾರೆಸ್ಟ್‌ಗೆ 2001ರಲ್ಲಿ ಯುನೆಸ್ಕೋ 'ಐತಿಹಾಸಿಕ ಸ್ಮಾರಕ' ಎಂದು ಮಾನ್ಯತೆ ನೀಡಿದೆ. ಇಲ್ಲಿಂದ ಸ್ವಲ್ಪ ಮುಂದೆ ಸಾಗಿದರೆ 'ಸೋಂಗ್ ಮೌಂಟೇನ್ ಜಿಯೋ ಪಾರ್ಕ್' ಅನ್ನು ಕೇಬಲ್ ಕಾರಿನಲ್ಲಿ ಅಥವಾ ಮೆಟ್ಟಿಲುಗಳನ್ನು ಬಳಸಿ ಏರಬಹುದು. ಈ ಪಾರ್ಕ್ ಅನ್ನು ಭೌಗೋಳಿಕ ಇತಿಹಾಸದ ಪಠ್ಯ ಪುಸ್ತಕ ಎಂದು ಕರೆಯುತ್ತಾರಂತೆ. ಚೀನಾದ ಐದು ಪ್ರಸಿದ್ಧ ಪರ್ವತಗಳಲ್ಲಿ ಇದೂ ಒಂದು. ಪರ್ವತದ ಇನ್ನೊಂದು ಕಡೆ ಮೆಟ್ಟಿಲುಗಳನ್ನೇರಿದರೆ ಬುದ್ಧ ಗುಹೆಯನ್ನು ನೋಡಬಹುದು. ನಾವು ಹೋದಾಗ ಇಡೀ ಪರ್ವತ ಹಿಮವನ್ನು ಹೊದ್ದು ಹೊಳೆಯುತ್ತ ಬಹಳ ರಮಣೀಯವಾಗಿತ್ತು.